INDIAN JOURNAL OF HISTORY AND ARCHAEOLOGY

ISSN (e):2582-225X
Vol-3, Issue -2, July-Auguest, 2021, Page No,36-42
Peer Reviewed Journal, Referred Journal

# ಬ್ರಿಟಿಷರ ಆಡಳಿತ ಕಂಡ ಧಾರವಾಡ ಪ್ರದೇಶದ ವೈಶಿಷ್ಟ್ಯತೆ

ಮಂಜುಳಾ ಯಲಿಗಾರ[1]

ಕರ್ನಾಟಕ ಚರಿತ್ರೆಯನ್ನು ಪುನರ್‌ರಚಿಸುವಲ್ಲಿ ಧಾರವಾಡ ಜಿಲ್ಲೆಯು ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಏಕೆಂದರೆ, ಈ ಪ್ರದೇಶವೂ ಪ್ರಾಗೈತಿಹಾಸಿಕ ಕಾಲಸಂದರ್ಭದಿಂದಲೂ ಜನರ ವಸತಿ ಮತ್ತು ಬದುಕಿಗೆ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಕಾರಿಯಾಗಿ ತುಂಗಭದ್ರಾ, ವರದಾ ಮತ್ತು ಮಲಪ್ರಭಾ ನದಿಗಳನ್ನೊಳಗೊಂಡ ಜೀವ ಜಲಧಾರೆಗಳಿವೆ. ಮತ್ತೇ ಭೌಗೋಳಿಕತೆ ಹಾಗೂ ಚಾರಿತ್ರಿಕ ದೃಷ್ಠಿಕೋನದಿಂದ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಕೂಡ ಪಡೆದುಕೊಂಡಿದೆ. ಧಾರವಾಡ ಪ್ರದೇಶದಲ್ಲಿ ಅನೇಕ ರಾಜವಂಶಗಳು ಅಂದರೆ ಬಾದಾಮಿ ಚಾಲುಕ್ಯರ ಕಾಲದಿಂದ ಹಿಡಿದು ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯರ, ಕಲಚೂರಿ, ದೇವಗಿರಿಯ ಯಾದವರು, ಹೊಯ್ಸಳ, ವಿಜಯನಗರದ ಅರಸರ ಜೊತೆಗೆ ಮಹಾಮಂಡಳೇಶ್ವರರಾದ, ಗೋವಾ ಕದಂಬ ಹಾಗೂ ಹಾನಗಲ್ಲ ಕದಂಬರು, ಸಿಂಧರು, ಬಹುಮನಿ ಅರಸರು, ಮೊಘಲರು, ಸವಣೂರಿನ ನವಾಬರು, ಮರಾಠರು, ಪೇಶ್ವೆಯರು, ಆಡಳಿತಕ್ಕೆ ಒಳಪಟ್ಟಿದೆ. ಇದೇ ಅಲ್ಲದೇ ಈ ಜಿಲ್ಲೆಯು ಬ್ರಿಟಿಷರ ಆಳ್ವಿಕೆಗೂ ಕೂಡ ಒಳಪಟ್ಟಿರುತ್ತದೆ. ಆ ಕಾಲಘಟ್ಟದಲ್ಲಿ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಯನ್ನು ಕೂಡಾ ಕಂಡುಕೊಂಡಿರುತ್ತದೆ ಎಂಬುದನ್ನು ಗುರುತಿಸಲಾಗಿದೆ. ಹೀಗಾಗಿ ಈ ನೆಲದಲ್ಲಿ ಅನೇಕ ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಚಟುವಟಿಕೆಗಳ ಕೇಂದ್ರಗಳು ಅಭಿವೃದ್ಧಿ ಹೊಂದಿದ್ದವು. ಈ ತೆರೆನಾಗಿರುವಂಥ ಹಲವು ಹತ್ತು ಕಾರಣಗಳಿಂದ ಧಾರವಾಡ ಜಿಲ್ಲೆಯೂ ಅನೇಕ ಅಧ್ಯಯನಗಳು ಮತ್ತು ಸಂಶೋಧನೆಗಳಿಗೆ ಒಳಪಟ್ಟು ಸಾಂಸ್ಕೃತಿಕವಾಗಿ, ಚಾರಿತ್ರಿಕವಾಗಿ ಮತ್ತು ಆರ್ಥಿಕವಾಗಿ ಜೀವಂತವಾದ ಜಿಲ್ಲೆಯಾಗಿ ಚಾರಿತ್ರಾರ್ಹ ಪುಟಗಳಲ್ಲಿ ರಾರಾಜಿಸುತ್ತಲ್ಲದೆ. ಶೈಕ್ಷಣಿಕವಾಗಿಯೂ ತನ್ನ ತೆಕ್ಕೆಯಲ್ಲಿ ವಿದ್ವಾಂಸರಿಗೆ, ಕವಿಗಳಿಗೆ, ಕಲಾಗಾರರಿಗೆ ಮತ್ತು ಸಂಶೋಧಕರಿಗೆ ಜನ್ಮ ನೀಡಿ 'ವಿದ್ಯಾನಗರಿ' ಎಂಬ ಖ್ಯಾತಿಗೂ ಕೂಡ ಪಾತ್ರವಾದಂಥ ಜಿಲ್ಲೆ ಧಾರವಾಡ ಆಗಿದೆ ಎಂದು ಹೇಳಬಹುದು.

ಮರಾಠರ ವಶದಲ್ಲಿದ್ದ ಧಾರವಾಡವನ್ನು ವಶಪಡಿಸಿಕೊಳ್ಳಲು ಹವಣಿಸುತ್ತಿದ್ದ ವೆಲ್ಲಸ್ಲಿಯು 1803ರಲ್ಲಿ ಕೋಟೆಯ ಒಳಗೆ ಸುತ್ತಾಡಿ ಈ ಪ್ರದೇಶದ ಮಹಿಮೆಯನ್ನರಿತು 1817ರಲ್ಲಿ ಪೇಶ್ವೆಯರಿಂದ ಕೆಲವು ಪ್ರದೇಶಗಳನ್ನು ಪಡೆದುಕೊಂಡ ತರುವಾಯ ಈ ಧಾರವಾಡವನ್ನೇ ಕೇಂದ್ರವನ್ನಾಗಿ ಗುರುತಿಸಿ

[1]. ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಹಾ.ಮಾ.ನ, ಸಂಶೋಧನ ಕೇಂದ್ರ, ಉಜಿರೆ. ಹಂಪಿ ಕನ್ನಡ ವಿಶ್ವವಿದ್ಯಾಲಯ, ಹಂಪಿ.

"ಧಾರವಾಡ ಸುಭಾ" ಎಂದು ಕರೆದುಕೊಂಡರು. ಅಂದಿನಿಂದ ಬ್ರಿಟಿಷರು ಈ ಪ್ರದೇಶದಲ್ಲಿ ಶಾಶ್ವತವಾಗಿ ವಾಸಿಸ ತೊಡಗಿದರು ಎಂಬುದನ್ನು ಗುರುತಿಸಬಹುದಾಗಿದೆ. ಸಮಗ್ರ ಮುಂಬಯಿ ಪ್ರಾಂತವನ್ನೇ ಪಡೆದುಕೊಂಡವರಲ್ಲಿ ಥಾಮಸ್ ಮನ್ರೋ ಮೊದಲಿಗರು. 1818ರಲ್ಲಿ ಬ್ರಿಟಿಷರು ಈ ಪ್ರದೇಶದಲ್ಲಿ ಆಳ್ವಿಕೆಯನ್ನು ವಹಿಸಿಕೊಂಡ ಹಿನ್ನೆಲೆಯಲ್ಲಿಯೇ ಅನಾರೋಗ್ಯದಿಂದ ಬಳಲಿದ ಮನ್ರೋ ಬಳ್ಳಾರಿಗೆ ಮರಳಿದಾಗ ಅವನ ಸ್ಥಾನದಲ್ಲಿ ಬಳ್ಳಾರಿಯ ಜಿಲ್ಲಾಧಿಕಾರಿಯಾಗಿದ್ದ ಚ್ಯಾಪ್ಲಿನ್ ಕೃಷ್ಣ ನದಿಯ ದಕ್ಷಿಣದ ಮರಾಠ ದೇಶದ 'ಪ್ರಿನ್ಸಿಪಾಲ್ ಕಲೆಕ್ಟರ್ ಆಗಿ ನೇಮಕಗೊಂಡು ಮುಂಬಾಯಿಯಲ್ಲಿದ್ದ ಎಲ್ಫಿನ್‌ಸ್ಟನ್‌ನ ಅಧೀನ ಅಧಿಕಾರಿಯಾದ ಈಗೀನ ಬೆಳಗಾವಿ, ವಿಜಾಪೂರ, ಸೊಲ್ಲಾಪೂರ ಜಿಲ್ಲೆಗಳು ಧಾರವಾಡ ಕೇಂದ್ರದ ಈ ಪ್ರದೇಶದಲ್ಲಿ ಸೇರಿದ್ದವು.

ಧಾರವಾಡ ಜಿಲ್ಲೆಯಲ್ಲಿ ಕ್ರಿ.ಶ 1800 ರಿಂದ 1947ರವರೆಗೆ 142 ವರ್ಷಗಳ ಅವಧಿಯಲ್ಲಿ ಸುಮಾರು 112 ಕಲೆಕ್ಟರಗಳು ಆಳ್ವಿಕೆಯನ್ನು ನಡೆಸಿದ್ದಾರೆ. ಕ್ರಿ.ಶ. 1830ರಲ್ಲಿ ದಕ್ಷಿಣ ಮರಾಠಾ ದೇಶವನ್ನು ರೆಗ್ಯುಲೇಶನ್ ಕಾಯ್ದೆಯ 7ರ ಅಡಿಯಲ್ಲಿ ತರಲಾಯಿತು. ಅಂದಿನ ಪ್ರಾಂತ್ಯಗಳು ಧಾರವಾಡ ಡಿಸ್ಟ್ರಿಕ್ಟ್ ಅಥವಾ ಜಿಲ್ಲಾ ಎಂಬ ಒಂದು ಕಲೆಕ್ಟೊರೇಟ್ ಒಳಗೆ ಆಡಳಿತ ವಿಭಾಗವಾಗಿ 17 ತಾಲ್ಲೂಕುಗಳನ್ನೊಳಗೊಂಡ ಆಡಳಿತ ಪ್ರದೇಶವಾಗಿತ್ತು. 1818ರಲ್ಲಿ ಪೇಶ್ವೆಗಳನ್ನು ಅಂತಿಮವಾಗಿ ಸೋಲಿಸಿ, ಆ ಮೂಲಕವಾಗಿಯೇ, ಭಾರತದಲ್ಲಿ ಅಧಿಕೃತ ಆಡಳಿತಕ್ಕೆ ಮುದ್ರೆಯನ್ನು ಹಾಕಿದವರು. ಅದು ತನ್ನ ಆಡಳಿತವನ್ನು ಧಾರವಾಡ ಪ್ರದೇಶಕ್ಕೂ ಕೂಡ ವಿಸ್ತರಿಸಿರುತ್ತದೆ. ಅಂದರೆ, ಈ ಧಾರವಾಡ ಪ್ರದೇಶವೂ ಕೂಡ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿರುತ್ತದೆ ಎಂದೇ ಹೇಳಬಹುದು. ಹೀಗೆ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯೂ ಮುಂಬಾಯಿ ಪ್ರಾಂತ್ಯದಲ್ಲಿ ತನ್ನ ಆಡಳಿತವನ್ನು ವಿಸ್ತರಿಸಿದಾಗ; ಬ್ರಿಟಿಷರು ನರಗುಂದದ ಬಾಬಾಸಾಹೇಬ್ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಅವರನ್ನು ಒಳಗೊಂಡಂತೆ ಹಲವು ಹತ್ತು ಸ್ಥಳೀಯ ಆಡಳಿತಗಾರರಿಂದ ಸಾಕಷ್ಟು ವಿರೋಧವನ್ನೇ ಎದುರಿಸಬೇಕಾಗಿರುತ್ತದೆ.

ಹುಬ್ಬಳ್ಳಿಯಲ್ಲಿ ಜ॥ ಪ್ರಿಜ್ಲರ್ ಹಾಗೂ ಧಾರವಾಡದಲ್ಲಿ ನೆವಾಲ್ ತಮ್ಮ ಸೇನೆಯೊಡನೆ ಇದ್ದರು. ಚಾಪ್ಲಿನ್ ಬದಲಿಗೆ 1819ರಲ್ಲಿ ಥ್ಯಾಕರೆಯೇ ಜಿಲ್ಲಾಧಿಕಾರಿಯಾಗಿ ಬಂದನು. 1824ರಲ್ಲಿ ಕಿತ್ತೂರಿನಲ್ಲಿ ಚೆನ್ನಮ್ಮಾಜಿಯ ವಿರುದ್ಧ ಹೋರಾಟದಲ್ಲಿ ಹತನಾದ. ಅನಂತರ 1824ರಲ್ಲಿ ದತ್ತಕನೊಬ್ಬನನ್ನು ಸ್ವೀಕರಿಸಿ ತೀರಿಕೊಂಡಾಗ ಆತನ ದತ್ತಪುತ್ರನನ್ನು ಮಾನ್ಯ ಮಾಡಲಿಲ್ಲ. ಕಲೆಕ್ಟರ್ ಥ್ಯಾಕರೆ ಅದರ ಆಡಳಿತವನ್ನು ಕೈಗೆತ್ತಿಕೊಂಡನು. ದೇಸಾಯಿ ವಾಡೆಯ ಖಜಾನೆಗೆ ಬೀಗಮುದ್ರೆ ಹಾಕಿದನು. ಮಲ್ಲಸರ್ಜನ್ ಪತ್ನಿ ಚೆನ್ನಮ್ಮಾಜಿ ಇದನ್ನು ತೀವ್ರವಾಗಿ ಪ್ರತಿಭಟಿಸಲು ಅವಳ ಜೊತೆ ಮಾತುಕತೆಗೆ ಹೋದಾಗ ಥ್ಯಾಕರೇ ಒರಟಾಗಿ ನಡೆದುಕೊಳ್ಳಲು ಕಿತ್ತೂರ ಸೇನೆ ಥ್ಯಾಕರೆ, ಬ್ಲ್ಯಾಕ್, ನ್ಯೊಯೆಲ್ ಡ್ರೈಟನ್ ಮುಂತಾದ 7 ಅಧಿಕಾರಿಗಳನ್ನು ಕೊಂದಿತು. ಅವರ ಸಮಾಧಿಗಳು ಇಂದಿಗೂ ಧಾರವಾಡ ಜಿಲ್ಲೆಯಲ್ಲಿವೆ. ಆಗ ದಕ್ಷಿಣ ವಿಭಾಗದ ಕಮಿಶನರ್ ಆಗಿದ್ದ ಚಾಪ್ಲಿನ್ ಮುಂದೆ ಭಾರೀ ಸೈನ್ಯ ಕೂಡಿಸಿ ದೇಸಾಯಿನಿ

ಚೆನ್ನಮಾಜಿಯನ್ನು ಸೋಲಿಸಿ ಬಂಧಿಸಿದ ಕಿತ್ತೂರು ಆಡಳಿತ ಧಾರವಾಡಕ್ಕೆ ಬಂತು. 1826ರಲ್ಲಿ ಪ್ರಪ್ರಥಮವಾಗಿ ಧಾರವಾಡದಲ್ಲಿ ಮರಾಠಿ ಶಾಲೆಯೊಂದನ್ನು ಆರಂಭಿಸಿದರು. 1830ರಲ್ಲಿ ಮೇಲೆ ಹೇಳಿದ ಎಲ್ಲ ಪ್ರದೇಶವನ್ನು ಮುಂಬೈ ಪ್ರಾಂತ್ಯದ ಒಂದು ಜಿಲ್ಲೆಯಾಗಿ ಮಾನ್ಯ ಮಾಡಿದರು. 1831ರಲ್ಲಿ ಪ್ರಥಮ ಕನ್ನಡ ಶಾಲೆಯೂ ಈ ನೆಲದಲ್ಲಿ ಆರಂಭಗೊಂಡಿರುತ್ತದೆ. 1830ರಲ್ಲಿ ನಾಗರಿಕ ಆಸ್ಪತ್ರೆಯೊಂದನ್ನು ನಿರ್ಮಾಣ ಮಾಡಿದರು. 1839ರಲ್ಲಿ ನಿಪ್ಪಾಣಿಯ ದೇಸಾಯಿಯ ಪ್ರದೇಶವನ್ನು ಬೆಳಗಾವಿ ಜಿಲ್ಲೆಗೆ ಸೇರಿಸಿದಾಗ ಅಣ್ಣಿಗೇರಿ ಪರಿಸರದ ಅವನಿಗೆ 13 ಗ್ರಾಮಗಳನ್ನು ಧಾರವಾಡ ಜಿಲ್ಲೆಗೆ ಸೇರಿಸಲಾಯಿತು. ಇದನ್ನೇ ಕನ್ನಡ ಪ್ರದೇಶವೆಂದು ಮನ್ರೋ ಮದ್ರಾಸ ಪ್ರಾಂತ್ಯ ಬಳ್ಳಾರಿಗೆ ಸೇರಿಸಬೇಕೆಂದು ಸೂಚಿಸಿದರು. ಆದರೆ ಈ ಪ್ರದೇಶದ ಮರಾಠ ಸಂಸ್ಥಾನಿಕರು ಪುಣೆ, ಮುಂಬೈ, ಜೊತೆ ನಿಕಟ ಸಂಕರ್ಪವಿರುವುದರಿಂದ ಈ ಪ್ರದೇಶವನ್ನು ಮುಂಬೈ ಅಧಿಪತ್ಯದಲ್ಲಿ ಮುಂದುವರೆಸಲು ನಿರ್ಧರಿಸಿದ ಪರಿಣಾಮವಾಗಿ 1830ರಲ್ಲಿ ಧಾರವಾಡ ಜಿಲ್ಲೆಯಾಯಿತು. 1829ರಲ್ಲಿ ಬೆಳಗಾವಿ ಜಿಲ್ಲಾ ಪ್ರದೇಶದಲ್ಲಿದ್ದ ಸಂಗೊಳ್ಳಿ ರಾಯಣ್ಣನನ್ನು ಬಂಧಿಸಿ 1830ರಲ್ಲಿ ಧಾರವಾಡಕ್ಕೆ ತರಲಾಯಿತು. ಅದೇ ವರ್ಷ ಕಿತ್ತೂರ ದೇಸಾಯಿನಿ ವೀರಮ್ಮನನ್ನು ತಂದು ಕುಸುಗಲ್‌ನಲ್ಲಿ ಬಂಧನದಲ್ಲಿ ಇಡಲಾಯಿತು.

ಬ್ರಿಟಿಷರು 1818-1821ರ ನಡುವೆ 71 ಗ್ರಾಮಗಳಲ್ಲಿ ವಸತಿಗೆ ಜನರನ್ನು ಆಕರ್ಷಿಸಿ ಕೃಷಿ ಕಾರ್ಯವನ್ನು ಆರಂಭಿಸಿದರು. ಇದೇ ಅಲ್ಲದೇ ಭೂಕಂದಾಯವನ್ನು ನಿರ್ಣಯ ಮಾಡಿದರು. ಹತ್ತಿ ಬೆಳೆವ ನಾಡಾದ ಧಾರವಾಡ ಜಿಲ್ಲೆಯಲ್ಲಿ ಮಹಿಳೆಯರು ದಿನವಿಡೀ ನೂಲೂವ ನೇಯ್ಗೆಯ ಉದ್ಯೋಗವನ್ನು ಆರಂಭಿಸಿದರು. ಅಣ್ಣಿಗೇರಿ ಉಪ್ಪಿನ ಬೆಟಗೇರಿ ಗರಗ, ಹುಬ್ಬಳ್ಳಿ, ಡಂಬಳ, ನರಗುಂದ, ನವಲಗುಂದಂಥ ಸ್ಥಳಗಳಲ್ಲಿ ನೇಯ್ಗೆಯವರಿದ್ದರು. ಧಾರವಾಡವು 19ನೇ ಶತಮಾನದ ಅಂತ್ಯದವರೆಗೆ ಶಾಂತಿಯುತವಾಗಿತ್ತು ಎಂದು ಹೇಳಬಹುದು. ಏಕೆಂದರೆ, ಬ್ರಿಟಿಷರು ತಮ್ಮ ಆಗಮನದ ಅನಂತರ ಶಿಕ್ಷಣ, ಸಾರಿಗೆ, ವೈದ್ಯಕೀಯ ಕಡೆಗೆ ಹೆಚ್ಚು ಗಮನ ಹರಿಸಿರುವುದನ್ನು ಗುರುತಿಸಬಹುದು. 1826ರಲ್ಲಿ ಸರ್ಕಾರ ಧಾರವಾಡ ಮತ್ತು ಹುಬ್ಬಳ್ಳಿಗಳಲ್ಲಿ ಒಂದೊಂದು ಮರಾಠ ಶಾಲೆ ತೆರೆದರು. ರಾಣಿಬೆನ್ನೂರು, ಕನ್ನಡ ಶಾಲೆ, ಧಾರವಾಡದಲ್ಲಿ ಇಂಗ್ಲೀಷ ಶಾಲೆ ಪ್ರಾರಂಭಿಸಿದರು. ಹಾಗೆಯೇ, ಈ ಸಮಯದಲ್ಲಿಯೇ ಬ್ರಿಟಿಷರು ಧಾರವಾಡದಲ್ಲಿ 1848ರಲ್ಲಿ ಒಂದು ಆಂಗ್ಲ ಮಾಧ್ಯಮದ ಶಾಲೆಯನ್ನು ಆರಂಭಿಸಿದರು. ಎಲಿಯಟ್ ಎಂಬ ಇಂಗ್ಲೀಷ್ ಅಧಿಕಾರಿ ಕನ್ನಡಕ್ಕೆ ಪ್ರಾಶ್ಯಸ್ತ ನೀಡಿದರು. ಹಾಗೆಯೇ ಡೆ. ಚನ್ನಬಸಪ್ಪ ಹೆಬ್ಲಿಕ್, ಮೋಗ್ಲಿಂಗ್, ಕಿಟಲ್, ಅನಂತರ ಅಂದರೆ, 1836ರಲ್ಲಿ ಬಾಸೆಲ್ ಮಿಷನ್ ತೆರೆಯಿತು. ಅನಂತರದ ದಿನಗಳಲ್ಲಿ ಇದು ಒಂದು ತರಬೇತಿ ಕಾಲೇಜು ಎಂದೇ ಹೆಚ್ಚು ಪ್ರಸಿದ್ಧಿಯೇ ಆಗಿರುತ್ತದೆ. ಸಂಸ್ಥೆಯು ಮತ್ತೊಂದು ಶಾಲೆಯನ್ನು ಸಂಸ್ಕೃತ ಮುಂತಾದವರ ಪ್ರಯತ್ನದಿಂದ ಶೈಕ್ಷಣಿಕ ಕೇಂದ್ರವಾಗಿ ಅಭಿವೃದ್ಧಿ ಹೊಂದಿತು. 1840ರಲ್ಲಿ ಕ್ಯಾಥೋಲಿಕ್ ಚರ್ಚ್‌ನ್ನು ನಿರ್ಮಾಣ ಮಾಡಿದರು. 1848ರಲ್ಲಿ ಸರಕಾರಿ ಆಂಗ್ಲ ಶಾಲೆಯ ಸ್ಥಾಪನೆ, 1849ರಲ್ಲಿ ಶ್ರೀಗುರುನಾಥರಾವ್ ಪಾಠಕ ಇಬರಿಂದ ಸಂಸ್ಕೃತ ಪಾಠ

ಶಾಲೆಯ ಆರಂಭ, 1861ರಲ್ಲಿ ವೆಂಕಟರಂಗೋ ಕಟ್ಟಿ ಅವರಿಂದ ಕನ್ನಡದ ಪ್ರಥಮ ಮಾಸಿಕ ಜ್ಞಾನಬೋಧಕ ಪತ್ರಿಕೆ ಆರಂಭಗೊಂಡಿತ್ತು. 1883ರಲ್ಲಿ ಪುರಸಭೆಯ ಪ್ರದೇಶವು ಸಿದ್ಧಾಪುರ, ಲಕಮನಹಳ್ಳಿ, ಹಾವೇರಿ ಪೇಟೆ, ಬಗ್ತಾಲನ್, ಮಡಿಹಾಲ್, ಗಳಗಂಜಿಕೊಪ್, ಮಲಾಪುರ, ಕಮಲಪುರ, ನಾರಾಯಣಪುರ, ಸಪ್ತಾಪುರ, ಅತ್ತಿಕೊಳ್ಳ ಮತ್ತು ಹೊಸಯಲ್ಲಾಪುರವನ್ನು ಒಳಗೊಂಡಿತ್ತು. 1845ರಲ್ಲಿ ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸಲಾಗಿರುತ್ತದೆ. ಈ ಬ್ರಿಟಿಷ್ ಸರ್ಕಾರವು 1888ರಲ್ಲಿ ರೈಲ್ವೆ ನಿಲ್ದಾಣವನ್ನು ಕೂಡ ಸ್ಥಾಪಿಸಿರುತ್ತದೆ ಎಂಬದನ್ನು ಈ ಮುಖೇನ ಗುರುತಿಸಲಾಗಿದೆ.

ಭೂಕಂದಾಯದ ಇತ್ಯರ್ಥ ನಿರ್ಣಯವು 1851ರಲ್ಲಿ ಮುಗಿದಿರುತ್ತದೆ. ಸರ್ವೇಕ್ಷಣೆ ಆಗಿ ಭೂಮಾಲೀಕರ ಸಾಲದ ಹೊರೆ ಕಡಿಮೆಯಾಯಿತು. 1852ರಲ್ಲಿ ಇನಾಂ ಕಮಿಶನ್ ಅನೇಕ ಜಮೀನ್ದಾರರ ಇನಾಂಗಳನ್ನು ಕಸಿದುಕೊಂಡಿತ್ತು. 1851ರ ಕಾನೂನಿನ ಪ್ರಕಾರ ಹುಬ್ಬಳ್ಳಿ, ಧಾರವಾಡ, ರಾಣೇಬೆನ್ನೂರು ಗದಗ-ಬೇಟಗೇರಿ, ನರಗುಂದ, ನವಲಗುಂದ ಈ ಊರುಗಳಲ್ಲಿ ಪುರಸಭೆಗಳು ಪ್ರಾರಂಭವಾದವು. 1873ರ ಕಾನೂನಿನಂತೆ, ಬ್ಯಾಡಗಿ, ಹಾವೇರಿ, ಹಾನಗಲ್ಲಗಳು ಕೂಡಾ ಪುರಸಭೆಗಳಾದವು. **ವೃತ್ತ** ಎಂಬ ಮರಾಠಿ ಪತ್ರಿಕೆಯೂ ಧಾರವಾಡದ ಮೊದಲ ಪತ್ರಿಕೆಯಾಗಿರುತ್ತದೆ. **ಛಾಪಾ** ಎಂಬುದು ಇನ್ನೊಂದು ಪತ್ರಿಕೆ. ಅನಂತರದಲ್ಲಿ ಚಂದ್ರೋದಯ ಎಂಬ ಪತ್ರಿಕೆಯೂ ಆರಂಭಗೊಂಡಿರುತ್ತದೆ ಎಂದು ಹೇಳಬಹುದು. ನರಗುಂದದ ಭಾಸ್ಕರರಾವ್ ಅಥವಾ ಬಾಬಾಸಾಹೇಬ್ ಭಾವೆಯ 1846ರಲ್ಲಿ ಇತನ ದತ್ತಕ ಪಡೆಯಲು ಬ್ರಿಟಿಷರ ಅನುಮತಿ ಪಡೆಯಲು ಯತ್ನಿಸಿ ವಿಫಲನಾಗಿ ಬ್ರಿಟಿಷರ ವಿರುದ್ಧ ಕೆಂಡಕಾರ ತೊಡಗಿದನು. ಅನಂತರ ಯುದ್ಧ ತಯಾರಿ ನಡೆಸುವ ಸಿದ್ದತೆ ಗೊತ್ತಾಗಿದ್ದ ಬ್ರಿಟಿಷ್ ಕಲೆಕ್ಟರ್ ಒಗಿಲ್ಸ್ ತನ್ನಲ್ಲಿರುವ ಶಸ್ತ್ರಾಸ್ತ್ರಗಳನ್ನು ಫಿರಂಗಿಗಳನ್ನು ಧಾರವಾಡಕ್ಕೆ ಕಳುಹಿಸಬೇಕು ಎಂದು ಆದೇಶವಿತ್ತನು. ಶಸ್ತ್ರಾಸ್ತ್ರಗಳು ಮಾರ್ಗಮಧ್ಯದಲ್ಲಿಯೇ ಲೂಟಿ ಆದವು. ಶಿರಹಟ್ಟಿಯ ಕೆಂಚನಗೌಡನು ಹಮ್ಮಿಗಿಯಲ್ಲಿರುವ ವಾಡೆಯಲ್ಲಿ ಶಸ್ತ್ರಾಸ್ತ್ರಗಳಿವೆ ಎಂದು ಸುದ್ದಿ ತಿಳಿದ ಬ್ರಿಟಿಷ್ ನೌಕರರು ಅದನ್ನೆಲ್ಲಾ ವಾಡೆಯಲ್ಲಿ ಕೂಡಿ ಹಾಕಿ ಬೀಗಮುದ್ರೆ ಮಾಡಿ ಅಲ್ಲಿ ಪಹರೆ ನಿಲ್ಲಿಸಿ ಧಾರವಾಡಕ್ಕೆ ವರದಿ ಮಾಡಿದನು. ಅನಂತರದಲ್ಲಿ ಮುಂಡರಗಿ ಭೀಮರಾಯ ಇದರ ಮೇಲೆ ದಾಳಿ ಮಾಡಿದನು. ಇದನ್ನು ತಿಳಿದ ಬ್ರಿಟಿಷರು ಮೇಜರ್ ಹ್ಯೂಸ್ ನೇತೃತ್ವದಲ್ಲಿ ಯುದ್ಧ ನಡೆದಾಗ ಕೆಲಕಾಲ ಘರ್ಷಣೆಯ ಅನಂತರ ಕೆಂಚನಗೌಡನನ್ನು ಕೊಂದು ಭೀಮರಾಯನು ತಾನೂ ಗುಂಡು ಹಾಕಿಕೊಂಡನೆಂದು ಹೇಳಲಾಗುತ್ತದೆ. 1850ರಲ್ಲಿ ಭಾರತ ಸರ್ಕಾರದ ಕಾಯಿದೆಯ ಅಡಿಯಲ್ಲಿ ಹುಬ್ಬಳ್ಳಿ ಮುನ್ಸಿಪಲ್ ಮಂಡಳಿಯನ್ನು 1855ನೇ ಆಗಸ್ಟ್ 15ರಂದು ಸ್ಥಾಪಿಸಲಾಯಿತು. ಮತ್ತೇ ಧಾರವಾಡ ಮುನ್ಸಿಪಲ್ ಮಂಡಳಿ ಮೊದಲ ಬಾರಿಗೆ 1856ನೇ ಜನವರಿ 01ರಂದು ಅಸ್ತಿತ್ವಕ್ಕೆ ಬಂದಿರುತ್ತದೆ. 1857-58ರ ಹೋರಾಟದಲ್ಲಿ ಧಾರವಾಡ ಜಿಲ್ಲೆಯಲ್ಲಿ ಈ ಹೋರಾಟಕ್ಕೆ ಸಂಬಂಧಿಸಿದ 40 ಜನರಿಗೆ ನೇಣು ಹಾಕಿದರಲ್ಲದೇ ಸುಮಾರು 100

ಜನರನ್ನು ವಿವಿಧ ಅವಧಿಯ ಶಿಕ್ಷೆ ಮತ್ತು ದ್ವೀಪಾಂತರ ವಾಸಕ್ಕೆ ಒಳಪಡಿಸಿದರು. ಕೊಪ್ಪಳ ಮತ್ತು ನರಗುಂದದ ಬಂಧನದಲ್ಲಿದ್ದ ಸೈನಿಕ ನ್ಯಾಯಾಲಯಕ್ಕೆ ಒಳಪಡಿಸಿ 100 ಜನರನ್ನು ಗುಂಡಿಟ್ಟುಕೊಂದು ನರಗುಂದದ 41 ಗ್ರಾಮಗಳನ್ನು ಬ್ರಿಟಿಷರು ವಶಕ್ಕೆ ಪಡೆದುಕೊಂಡರು.

ಧಾರವಾಡ ಜಿಲ್ಲೆಯಲ್ಲಿ 1856ರ ಹೊತ್ತಿಗೆ ಹುಬ್ಬಳ್ಳಿಯಿಂದ ಹರಿಹರದವರೆಗೂ ಸರ್ವಋತು ರಸ್ತೆ ನಿರ್ಮಾಣವಾಯಿತು. 1865ರಲ್ಲಿ ಬಾಲಕರ ತರಬೇತಿ ಕಾಲೇಜಿನಿಂದ ವಾರ ಪತ್ರಿಕೆಯೊಂದು ಆರಂಭಗೊಂಡಿರುತ್ತದೆ. 1866ರಲ್ಲಿ ಪುಣೆ-ಬೆಂಗಳೂರು ರಸ್ತೆಯ ವರದಾನದಿಗೆ ಸೇತುವೆ ಕಟ್ಟಿದರು. ಸ್ಥಳೀಯ ರಸ್ತೆಗಳನ್ನು ರಚನೆಕಾರ್ಯ ಕೈಗೊಂಡರು. ಹತ್ತಿ ಜಿನ್ನಿಂಗ್ ಘಟಕ 1881 ಎಸ್.ಎಂ. ಸ್ಪಿನ್ನಿಂಗ್ ಆಂಡ್ ವಿವ್ವಿಂಗ್ ಮಿಲ್ 1881ರಲ್ಲಿ ಹುಬ್ಬಳ್ಳಿಯಲ್ಲಿ ಹುಟ್ಟಿತು. ಮುಂಬೈಗೆ ರೈಲು ಸಂಪರ್ಕ ಬೆಳೆದು ವಾಸ್ಕೊ ಕೂಡಾ ರೈಲು ಸಂಪರ್ಕವಾಯಿತು. ಇದೇ ಅಲ್ಲದೇ ಹುಬ್ಬಳ್ಳಿಯಲ್ಲಿ ರೈಲ್ವೆ ವರ್ಕಶಾಪ್ ಆರಂಭವಾಯಿತು. ಹುಬ್ಬಳ್ಳಿ ಕೈಗಾರಿಕೆ ನಗರವಾಯಿತು. ಧಾರವಾಡದಲ್ಲಿ ಸದರ್ನ್ ಮರಾಠ ರೇಲ್ವೆಯ ಆಡಳಿತ ಕಛೇರಿ ಕೂಡಾ 1881ರಲ್ಲಿ ಅಸ್ತಿತ್ವಕ್ಕೆ ಬಂದಿತು.

ಬ್ರಿಟಿಷರ ಆಗಮನದಿಂದ ಜಿಲ್ಲೆಯಲ್ಲಿ ಕ್ರಿಶ್ಚಿಯನ್ ಮಿಶನರಿಗಳು ಬರತೊಡಗಿದವು. ಪರಿಣಾಮವಾಗಿ ಧಾರವಾಡದಲ್ಲಿ ಮುಸ್ಲಿಮ್, ಮರಾಠಿ, ಯುರೋಪಿಯನ್ ಹೀಗೆ ವಿವಿಧ ಧರ್ಮಗಳು ವಿವಿಧ ಭಾಷೆ ಜನರು ವಾಸಿಸತೊಡಗಿದಾಗ ಕಸ್ಮೊಪೊಲಿಟನ್ ನಗರವಾಗಿ ಧಾರವಾಡ ಹೊರಹೊಮ್ಮಿತು. ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬೆಳವಣಿಗೆ ಕಂಡ ಜಿಲ್ಲೆಯಲ್ಲಿ ಮರಾಠ ಪೇಶ್ವಯರ ಕಾಲದ ಮರಾಠ ಹಾಗೂ ಬ್ರಿಟಿಷರ ಪ್ರಭಾವದಿಂದ ಇಂಗ್ಲೀಷ ಭಾಷೆಯ ವ್ಯಾಮೋಹ ಉಂಟಾದಾಗ ಕನ್ನಡ ಭಾಷಾ ಸಾಹಿತ್ಯದ ಚಿಂತನೆಯಾಯಿತು. 1857ರಲ್ಲಿ ಬಾಲಕರ ತರಬೇತಿ ಕಾಲೇಜು ಮತ್ತು 1885ರಲ್ಲಿ ಬಾಲಕಿಯರ ತರಬೇತಿ ಕಾಲೇಜುಗಳು ಕನ್ನಡಕ್ಕೆ ಶಿಕ್ಷಣದಲ್ಲಿ ಸ್ಥಾನಮಾನ ದೊರಕಿಸುವ ಪ್ರಯತ್ನದ ಫಲವಾಗಿ 1890ರಲ್ಲಿ ಕನ್ನಡಿಗರ ಸಹಾಯದಿಂದ ಕರ್ನಾಟಕ ವಿದ್ಯಾವರ್ಧಕ ಸಂಘವೊಂದು ಉದಯವಾಯಿತು. ಧಾರವಾಡದಲ್ಲಿ 1888ರಲ್ಲಿ ಸ್ಥಾಪಿತವಾದ ದಕ್ಷಿಣ ವಲಯ ಮರಾಠ ರೈಲ್ವೆಯ ಆಡಳಿತ ಕಚೇರಿಯನ್ನು, 1914ರಲ್ಲಿ ಕರ್ನಾಟಕ ಪ್ರಾಚ್ಯ ಸಂಶೋಧನಾ ಕೇಂದ್ರದ ಸ್ಥಾಪನೆ, 20ನೇ ಶತಮಾನದ ಆದಿಭಾಗದಲ್ಲಿ 1917ರಲ್ಲಿ ಕರ್ನಾಟಕ ಕಾಲೇಜನ್ನು ಮತ್ತು 1918ರಲ್ಲಿ ದಕ್ಷಿಣ ಭಾರತದ ಹಿಂದಿ ಪ್ರಚಾರ ಸಭಾವನ್ನು ಕೂಡ ಸ್ಥಾಪನೆಯಾಯಿತು. 1927ರಲ್ಲಿ ಸೈಮನ್ ಆಯೋಗದ ವಿರುದ್ಧ ಪ್ರತಿಭಟನಾ ಚಳವಳ ಮಾಡಲಾಗಿರುತ್ತದೆ. 1930ರಲ್ಲಿ ರಂಗನಾಥ ದಿವಾಕರ ಅವರ ನೇತೃತ್ವದಲ್ಲಿ ಕೈಗೊಂಡಿದ್ದ ಉಪ್ಪಿನ ಸತ್ಯಾಗ್ರಹದಿಂದಾಗಿಯೇ ಇವರನ್ನು ಬಂಧಿಸಲಾಗಿತ್ತು. ಮತ್ತೇ ಹುಕ್ಕೇರಿಕರ ರಾಮರಾವ್, ಡಿ.ಪಿ.ಕರಮರಕರ, ನಾರಾಯಣರಾವ್ ಕಬ್ಬೂರ ಇವರುಗಳಿಂದ ಬ್ರಿಟಿಷ್ ವಿರುದ್ಧ ಧಾರವಾಡದಲ್ಲಿ ಧ್ವಜ ಅವರೋಹಣ ಮಾಡಿದರು. ಹಾಗೆಯೇ, 1947ರಲ್ಲಿ ಕೆಎಲ್ಇ ತಾಂತ್ರಿಕ

ವಿಶ್ವವಿದ್ಯಾಲಯವನ್ನು ಮೊದಲು ಇದನ್ನು ಬಿ.ವಿ. ಭೂಮರೆಡ್ಡಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಎಂದು ಕರೆಯಲಾಗುತ್ತಿತ್ತು.

ರಾಷ್ಟ್ರೀಯ ಜಾಗೃತಿ ಉಂಟಾದ ಕರ್ನಾಟಕ ಏಕೀಕರಣ ವಿಚಾರವು ಇಲ್ಲಿ ಮೊಳಕೆ ಒಡೆದು ಆಲೂರು ವೆಂಕಟರಾಯರ ಸಾಧನೆಯ ಪ್ರಯತ್ನಗಳಲ್ಲಿ ಕರ್ನಾಟಕ ಸಂಘವು ಮುಂಚೂಣಿಯಲ್ಲಿತ್ತು. 1895–96ರ ಸಂದರ್ಭಕ್ಕೆ ರಾಷ್ಟ್ರೀಯ ಜಾಗೃತಿ ಬೆಳೆದಂತೆ ಹಲವು ಹತ್ತು ಪತ್ರಿಕೆಗಳ ಮುಖಾಂತರ ರಾಷ್ಟ್ರೀಯ ಆಂದೋಲನ ಚಟುವಟಿಕೆಗಳು ಬೌದ್ಧಿಕ ಕೇಂದ್ರವಾಗಿ ಧಾರವಾಡವೇ ಇತ್ತು. ಧಾರವಾಡವು ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ ಮತ್ತು ಕರ್ನಾಟಕ ಕುಲಪುರೋಹಿತ ಶ್ರೀ ಆಲೂರು ವೆಂಕಟರಾವ್ ಅವರ ನೆಲೆಯಾಗಿದೆ. ಶ್ರೀ ಆಲೂರು ವೆಂಕಟರಾವ್ ಅವರ ಕರ್ನಾಟಕ ಗಾಥಾ ವೈಭವ ಎಂಬ ಕೃತಿಯೂ ಕನ್ನಡ ಮಾತನಾಡುವ ಪ್ರದೇಶಗಳ ಏಕೀಕರಣದ ಕಲ್ಪನೆಯನ್ನು ತಳಸ್ಪರ್ಶಿಯಾಗಿಯೇ ರೂಪಿಸಿರುತ್ತದೆ ಎಂದೇ ಹೇಳಬಹುದು. ಇದರ ಪ್ರತಿಫಲವಾಗಿಯೇ ಹೋಂ–ರೋಲ್‌ಲೀಗ್ ಚಳವಳಿ, ಅಸಹಕಾರ ಚಳವಳಿ, ಧಾರವಾಡ ಗೋಳಿಬಾರ್, ಕಾನೂನುಭಂಗ ಚಳವಳಿ, ಕ್ವಿಟ್ ಇಂಡಿಯಾ ಚಳವಳಿ, ಸೇವಾದಳ ಸ್ಥಾಪನೆ, ಏಕೀಕರಣ ಚಳವಳಿ, ಕರನಿರಾಕರಣೆಯಂಥ ಸತ್ಯಾಗ್ರಹಗಳು ಮತ್ತು ಚಾರಿತ್ರಿಕ ಘಟನೆಗಳು ಈ ಧಾರವಾಡ ಪ್ರದೇಶದಲ್ಲಿ ಸಂಭವಿಸಿದವು ಎಂಬುದನ್ನು ಗುರುತಿಸಬಹುದು.

ಕರ್ನಾಟಕದ ಏಕೀಕರಣಕ್ಕೆ ಧಾರವಾಡವು ಅಪಾರವಾದಂಥ ಕೊಡುಗೆಯನ್ನೇ ತನ್ನದೇ ಆದಂಥ ರೀತಿಯಲ್ಲಿ ನೀಡಿರುತ್ತದೆ. ಮತ್ತೇ, ಆ ಕಾರಣವಾಗಿಯೇ ಈ ಪ್ರದೇಶವನ್ನು ಸಂಯುಕ್ತ ಕರ್ನಾಟಕದ ಚಳವಳಿಯ ಕೇಂದ್ರ ಬಿಂದು ಎಂದು ಸುಲಭವಾಗಿಯೇ ಕರೆಯಬಹುದು. 19ನೇ ಶತಮಾನದ ಉತ್ತರಾರ್ಧದಲ್ಲಿ ಕರ್ನಾಟಕ ಏಕೀಕರಣದ ಚಳವಳಿ ಆರಂಭವಾಯಿತು. 1890ರಲ್ಲಿ ಆರ್.ಎಚ್. ದೇಶಪಾಂಡೆ ಅವರು ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ರಚಿಸಿದರು. 1912ರಲ್ಲಿ ಈ ಸಂಘವು ಬ್ರಿಟಿಷರಲ್ಲಿ ಕನ್ನಡ ಮಾತನಾಡುವ ಪ್ರದೇಶಗಳನ್ನು ವಿಲೀನಗೊಳಿಸುವಂತೆ ನಿರ್ಣಯವನ್ನು ಅಂಗೀಕರಿಸಿತು ಎಂದು ಹಲವು ಹತ್ತು ದಾಖಲೆಗಳು ದೃಢಪಡಿಸುತ್ತವೆ ಎಂದೇ ಹೇಳಬಹುದು. 1928ರಲ್ಲಿ ಈ ಕರ್ನಾಟಕ ವಿದ್ಯಾವರ್ಧಕ ಸಂಘವು ಕಾಂಗ್ರೆಸ್ ಭಾರತಕ್ಕೆ ಒಂದು ಸಂವಿಧಾನವನ್ನು ರೂಪಿಸಲು ಒಂದು ನಿರ್ಣಾಯವನ್ನು ಅಂಗೀಕರಿಸಿದಾಗ ಧಾರವಾಡದ ಎನ್.ಎಸ್.ಹರ್ಡೀಕರ್ ಮತ್ತು ರಂಗನಾಥ್ ದಿವಾಕರ್ ಅವರು 36,000ಕ್ಕೂ ಹೆಚ್ಚು ಜನರ ಸಹಿಯನ್ನು ಸಂಗ್ರಹಿಸಿದರು. ಮತ್ತೇ ಅವರು ಕನ್ನಡ ಮಾತನಾಡುವ ಪ್ರದೇಶಗಳನ್ನು ಒಂದೇ ರಾಜ್ಯದಲ್ಲಿ ವಿಲೀನಗೊಳಿಸಬೇಕು ಎಂದು ಒತ್ತಾಯಿಸಿರುವುದನ್ನು ಇಂದಿಗೂ ಕೂಡ ಗುರುತಿಸಬಹುದು. ಧಾರವಾಡ ಪ್ರದೇಶದಲ್ಲಿ ಆರಂಭವಾದಂಥ ಕರ್ನಾಟಕ ಏಕೀಕರಣ ಚಳವಳಿಯೂ ಕನ್ನಡ ಸಾಹಿತ್ಯಕ್ಕೆ ಹೊಸದೊಂದು ಆಯಾಮವನ್ನು ನೀಡುವಲ್ಲಿ ಪ್ರಧಾನವಾದ ಪಾತ್ರವನ್ನೇ ನಿರ್ವಹಿಸಿರುತ್ತದೆ. ಕರ್ನಾಟಕ ವಿದ್ಯಾವರ್ಧಕ ಸಂಘವು ಸಾಹಿತ್ಯ ಚಟುವಟಿಕೆಗಳಿಗೆ ಮತ್ತಷ್ಟು ವೇಗವನ್ನು ನೀಡಿತ್ತು. ಹಾಗೆಯೇ, ಈ ಸಂಘವು ರಾಜ್ಯ ಮಟ್ಟದ ಸಾಹಿತ್ಯ

ಉತ್ಸವಗಳನ್ನು ಪರಿಕಲ್ಪನೆ ಮಾಡುವಲ್ಲಿ ಹೆಚ್ಚು ಹೆಚ್ಚು ಸಹಾಯಕಾರಿಯೇ ಆಗಿರುತ್ತದೆ. ವಿ.ಕೆ.ಗೋಕಾಕ್ ಮತ್ತು ಇತರರು ನೀಡಿದ ಕರೆಯನ್ನು ಆಧರಿಸಿ ಬರಹಗಾರರು ಜನರಲ್ಲಿ ಏಕೀಕೃತ ಕರ್ನಾಟಕದ ಬಗೆಗೆ ಜಾಗೃತಿಯನ್ನು ಮೂಡಿಸಲು ಮೂಲಭೂತವಾಗಿ ಕೃತಿಗಳನ್ನು ತಯಾರಿಸಲು ಆರಂಭಿಸಿದರು. ಏಕೀಕರಣ ಚಳವಳಿಯು ಪ್ರಮುಖವಾಗಿ ದೀಪಗಳಲ್ಲಿ ಒಂದಾದ ಆಲೂರು ವೆಂಕಟರಾವ್ ಅವರಂಥವರು ಈ ಪ್ರದೇಶದಲ್ಲಿನ ಜನರನ್ನು ಒಗ್ಗೂಡಿಸುವ ಪರಿಕಲ್ಪನೆಯನ್ನು ಆರಂಭಿಸಿದ ಸಾಧನಕೇರಿಯೇ ಆಗಿದ್ದಾರೆ.

ಬ್ರಿಟಿಷ್ ಆಡಳಿತದ ಐತಿಹಾಸಿಕ ಕುರುಹುಗಳಾಗಿ ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿ, ಡಿ.ಸಿ. ಬಂಗ್ಲೆ, ಕರ್ನಾಟಕ ಕಾಲೇಜು, ಅಂಚೆ ಕಛೇರಿ, ಸಿವ್ಹಿಲ್ ಕೋರ್ಟ, ಸಿವ್ಹಿಲ್ ಆಸ್ಪತ್ರೆ, ಹೆಣ್ಣು ಮಕ್ಕಳ ತರಬೇತಿ ಶಾಲೆ, ಹೆಬಿಕ್ ಮೆಮೋರಿಯಲ್ ಚರ್ಚ್, ದರ್ಬಾರ್ ಹಾಲ್, ವಿದ್ಯಾವರ್ಧಕ ಸಂಘ, ಥಿಯೋಸೋಪಿಕಲ್ ಸೊಸೈಟಿ, ದಕ್ಷಿಣ ವಲಯ ರೇಲ್ವೆ ನಿಲ್ದಾಣ, ಮುಖ್ಯ ಕಾರ್ಯಪಾಲಕ ಅಭಿಯಂತರರ ಬಂಗ್ಲೆ, ಇತರ ದೇಸಾಯಿ ಬಂಗ್ಲೆಗಳು, ಜಿಮಕಾನ್ ಕ್ಲಬ್, ಥ್ಯಾಕರೇ ಸಮಾಧಿಯಂಥ ಬ್ರಿಟಿಷರ ಐತಿಹಾಸಿಕ ಸ್ಮಾರಕಗಳು ಇಂದಿಗೂ ಉಳಿದುಕೊಂಡು ಬಂದಿರುವುದನ್ನು ನಾವು ಕಾಣಬಹುದು.

ಹೀಗೆ, ಧಾರವಾಡ ಪ್ರದೇಶವು ಬ್ರಿಟಿಷ್ ಆಡಳಿತದ ಕಾಲ ಸಂದರ್ಭದಲ್ಲಿ ತನ್ನದೇ ಆದಂಥ ವೈಶಿಷ್ಟ್ಯತೆಯನ್ನು ಹೊಂದಿತ್ತು ಎಂಬುದು ಈ ಅಧ್ಯಯನದ ಮುಖೇನವಾಗಿಯೇ ತಿಳಿದುಬಂದಿರುತ್ತದೆ. ಮತ್ತೇ ಕನ್ನಡ ನೆಲೆದಲ್ಲಿ ಈ ಪ್ರದೇಶವು ಹಲವು ಹತ್ತು ಪ್ರಥಮಗಳಗೆ ಅಡಿಗಲ್ಲನ್ನು ಹಾಕಿರುತ್ತದೆ. ಹಾಗೆಯೇ, ಬ್ರಿಟಿಷ್ ಆಡಳಿತದ ಕೆಲವು ಕುರುಹುಗಳು ಸಂಶೋಧನೆಗಳಿಂದ ಹೊರಜಗತ್ತಿಗೆ ಬಂದಿರುತ್ತವೆ.

**ಆಕರ ಗ್ರಂಥಗಳು**


- ಕಟಗೇರಿ.ನ.ಹ, **ಗತಕಾಲದ ಧಾರವಾಡ,** ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳ.ಧಾರವಾಡ. 2007-08
- ಕಾಮತ್ ಸೂರ್ಯನಾಥ, **ಕರ್ನಾಟಕ ರಾಜ್ಯ ಗೆಜೆಟಿಯರ್ ಧಾರವಾಡ ಜಿಲ್ಲೆ**, ಸರ್ಕಾರಿ ಪುಸ್ತಕ ಮುದ್ರಣಾಲಯ ಬೆಂಗಳೂರು, 1995.
- ಚಿಶೋಲ್ಮ್ ಹಗ್, ಎಡ್, **ಧಾರವಾಡ ಎನ್ಸೈಕ್ಲೋಪೀಇಯಾ ಬ್ರಿಟನಿಕಾ,** ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ಕೇಂಬ್ರಿಡ್ಜ್, 1911.
- ಹಲಾಪ.ಜಿ.ಎನ್, **ಕರ್ನಾಟಕದಲ್ಲಿ ಆಡಳಿತ ವಿಕಸನ ರಾಜ್ಯ ಆಡಳಿತ ಅಧ್ಯಯನಗಳ ಭಾಗವಾಗಿ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1970.